ಅವರ ಮನೆ ತಲುಪಿದ್ದಾಯಿತು. ಕಾಯುತ್ತ ಹೊರಗೆ ನಿಂತ ಹಿರಿಯ ಜೀವವನ್ನು ಕಂಡು ನನ್ನಲ್ಲಿ ಅಪಾರ ಆದರ ಮೂಡಿತು. ಮನೆ ಪ್ರವೇಶಕ್ಕೇ ಇದ್ದ ಗ್ರಂಥಾಲಯ ಹಾಲಿನಲ್ಲಿ ನಮ್ಮನ್ನು ಕುಳ್ಳಿರಿಸಿ ಮಗಳಿಗೆ ಚಹಾ ತರಲು ಹೇಳಿದರು. ನಾನು ನನ್ನ ಪುಸ್ತಕವನ್ನು ಅವರ ಕೈಗಿಟ್ಟೆ. ಮುಖಪುಟದ ಚಿತ್ರ ಬರೆದವರನ್ನು ಹೊಗಳಿ ಒಳಪುಟದಲ್ಲಿ ನನ್ನ ವಿಳಾಸ ಮತ್ತು ಫೋನ್ ನಂಬರ್ ತೆಗೆದುಕೊಂಡು ಅಭಿಪ್ರಾಯವನ್ನು ಖಚಿತವಾಗಿ ತಿಳಿಸುವೆ ಎಂದು ಆಶ್ವಾಸನೆ ನೀಡಿ, ನಿಧಾನಕ್ಕೆ ಅಂದಿನ ಸಾಹಿತ್ಯ, ಅದರ ಬೇರುಗಳು, ಕವಲುಗಳು, ಪಾಶ್ಚಾತ್ಯ ಸಾಹಿತ್ಯ ಸಾಗುತ್ತಿರುವ ಹೊರಳು ದಾರಿಗಳ ಬಗ್ಗೆ ಮಾತನಾಡಿದರು. ಜೊತೆಗೆ ಯಾವುದೋ ಮನಃಶಾಸ್ತ್ರದ ಪುಸ್ತಕವನ್ನು ಪ್ರಸ್ತಾಪಿಸಿ, ಮನುಷ್ಯನ ನಡವಳಿಕೆಗಳ ಸುತ್ತ ಗಮನ ಸೆಳೆದರು. ಅನೇಕ ವಿಷಯಗಳನ್ನೊಳಗೊಂಡ ಆ ಒಂದು ತಾಸಿನ ಮಾತುಕತೆಯು ಕಾರ್ಯಾಗಾರವೊಂದರಲ್ಲಿ ಭಾಗವಹಿಸಿದ ಅನುಭವ ನೀಡಿತು. ಮತ್ತೆ ಮತ್ತೆ ಅವರನ್ನು ಭೇಟಿಯಾಗುತ್ತಿದ್ದರೆ ನಮ್ಮ ಜ್ಞಾನ, ಸಂವೇದನೆ ಮತ್ತು ದೃಷ್ಟಿಕೋನಗಳು ತಾನೇ ತಾನಾಗಿ ವಿಸ್ತಾರವಾಗುವುದೆಂದು ಅನಿಸಹತ್ತಿತು. ಇದು ಆಗಿದ್ದು ಸುಮಾರು 2013ರಲ್ಲಿ. ಅಲ್ಲಿಂದ ಮುಂದೆ ಭೇಟಿಯಾದ ಪ್ರತಿ ಬಾರಿಯೂ ಅವರು ನನ್ನೊಳಗೆ ಬೆರಗನ್ನು ಹುಟ್ಟಿಸುತ್ತಿದ್ದರು. ಅವರ ಜೀವನೋತ್ಸಾಹ, ಅಧ್ಯಯನದ ಆಸಕ್ತಿ, ಮನುಷ್ಯನ ಅಂತರಂಗವನ್ನು ಅರಿಯುವ ಕುತೂಹಲ ಎಲ್ಲರಿಗೂ ಮಾದರಿಯಾಗಿದ್ದವು.

ಬೆಳಗಾವಿಯಲ್ಲಿ ನಡೆಯುವ ಬಹುತೇಕ ಕಾರ್ಯಕ್ರಮಗಳಲ್ಲಿ ಅಧ್ಯಕ್ಷರಾಗಿಯೋ ಮುಖ್ಯ ಅತಿಥಿಗಳಾಗಿಯೋ ಇಲ್ಲವೇ ಪ್ರೇಕ್ಷಕರಾಗಿಯಾದರೂ ಚಂದ್ರಕಾಂತ ಕುಸನೂರರ ಹಾಜರಿ ಇದ್ದೇ ಇರುತ್ತಿತ್ತು. ಅವರ ಮಾತುಗಳನ್ನು ಕೇಳುವುದೂ ಒಂದು ಸೊಗಸು. ಸಾಹಿತ್ಯಾಸಕ್ತರೆಲ್ಲ ಅವರ ಭಾಷಣಕ್ಕಾಗಿ ಅವರು ಪ್ರತಿ ಸಾರಿಯೂ ತಪ್ಪದೇ ತರುವ ನಾವೀನ್ಯಕ್ಕಾಗಿ ಕಾಯುತ್ತ ಕುಳಿತಿರುತ್ತಿದ್ದರು. ಅವರಿಗಿರುವ ವಿಶಿಷ್ಟ ದೃಷ್ಟಿಕೋನದಿಂದ ಬಹುತೇಕರಿಗೆ ಅರಿವಾಗದ, ಹೊಳೆಯದ ಹೊಸ ವಿಷಯಗಳನ್ನೋ ಹೊಸ ವಿಶ್ಲೇಷಣೆಯನ್ನೋ ಹೊಸ ವಿವರಣೆಯನ್ನೋ ಅವರ ಭಾಷಣಗಳಲ್ಲಿ ಕೇಳಬಹುದಿತ್ತು. ಸಾಮಾನ್ಯರಿಗೆ ದಕ್ಕದ ಅಸಾಮಾನ್ಯ ಜೀವನ, ಅನುಭವ ಇಂಥ ಅಸಾಮಾನ್ಯ ವ್ಯಕ್ತಿತ್ವ ರೂಪಿಸುವ ಸಾಮರ್ಥ್ಯವನ್ನು ಹೊಂದಿರುತ್ತದೆಯೇನೋ. ಸ್ವಂತ ಪ್ರಯತ್ನ, ಬದುಕಿನ ಬಗೆಗಿನ ಅಪಾರ ಕುತೂಹಲ, ಮನುಷ್ಯನ ಮೇಲಿನ ಅಪರಿಮಿತ ಪ್ರೇಮ ಮತ್ತು ವಿಸ್ತಾರವಾದ ಓದು ಅದಕ್ಕೆ ಇಂಬಾಗಬೇಕೆಂಬುದೂ ಸತ್ಯವೇ.

ಕುಸನೂರರ ಜೀವನ ಪಯಣ ಅವರ ವ್ಯಕ್ತಿತ್ವ ಮತ್ತು ಸಾಧನೆಯ ಬಗ್ಗೆ ಬೆಳಕು ಚೆಲ್ಲಬಹುದೇನೋ? 1931 ಅಕ್ಟೋಬರ್ 21ರಂದು ಕಲಬುರ್ಗಿಯಲ್ಲಿ ಜನಿಸಿದ ಕುಸನೂರರ ಮಾತೃಭಾಷೆ ಕನ್ನಡವಾದರೂ ಹೈದರಾಬಾದ್ ನಿಜಾಮನ ಆಡಳಿತದಲ್ಲಿ ಕೇವಲ ಉರ್ದು ಮಾಧ್ಯಮದಲ್ಲಿ ಮಾತ್ರ ಕಲಿಕೆ ಸಾಧ್ಯವಿದ್ದುದರಿಂದ ಅವರು ಉರ್ದುವಿನಲ್ಲಿಯೇ ವ್ಯಾಸಂಗ ಮಾಡಿದರು. ಬಳಿಕ ಉಸ್ಮಾನಿಯ ವಿಶ್ವವಿದ್ಯಾಲಯದಿಂದ ಅಂಚೆ ತೆರಪು ಶಿಕ್ಷಣದ ಮೂಲಕ ಹಿಂದಿಯಲ್ಲಿ ಸ್ನಾತಕೋತ್ತರ ಪದವಿ ಪಡೆದ ಕುಸನೂರರು ಮೈಸೂರು, ರಾಯಚೂರು, ಮಹಾಗಾವ್, ಗುಲಬರ್ಗಾದಲ್ಲಿ ಉಪನ್ಯಾಸಕರಾಗಿ ಸೇವೆ ಸಲ್ಲಿಸಿದರು.

ಮೊದಲು ಹಿಂದೀ ಭಾಷೆಯಲ್ಲಿ ಕುಸನೂರರ ಸಾಹಿತ್ಯಸೃಷ್ಟಿ ಶುರುವಾಯಿತು. ಹಿಂದೀ ಭಾಷೆಯ ನಿಯತಕಾಲಿಕೆಗಳಲ್ಲಿ ಪ್ರಕಟವಾದ ಅವರ ಕವಿತೆಗಳು ಮತ್ತು ಸಣ್ಣಕತೆಗಳು ಅವರಿಗೆ ಒಳ್ಳೆಯ ಹೆಸರನ್ನು ತಂದು ಕೊಟ್ಟವು. ಕನ್ನಡದಲ್ಲಿ ಬರೆಯಲು ಅವರು ಪ್ರಾರಂಭಿಸಿದ್ದು ಕವಿ ದ.ರಾ. ಬೇಂದ್ರೆಯವರ ಒತ್ತಾಯದ ಮೇರೆಗೆ. 60ರ ದಶಕದಲ್ಲಿ ಧಾರವಾಡದಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭಾ ಆಯೋಜಿಸಿದ್ದ ಬಹುಭಾಷಾ ಕವಿಗೋಷ್ಠಿಯಲ್ಲಿ ಕುಸನೂರರು ಹಿಂದೀ ಕವಿಯಾಗಿ ಭಾಗವಹಿಸಿದ್ದರು.